**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**
**ಸಿಸಿ ನಂಬರ : 1057/2021**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಕೃಷ್ಣಪ್ಪ | ಸಿ.ಡಬ್ಲ್ಯು 2 |
| ತಂದೆಯ ಹೆಸರು | ಃ ರಾಮಯ್ಯ | ಪಿ.ಡಬ್ಲ್ಯು 2 |
| ವಯಸ್ಸು | ಃ 50 ವರ್ಷ | |
| ಉದ್ಯೋಗ | ಃ ಕೂಲಿ | |
| ವಾಸ ಸ್ಥಳ | ಃ ಬೀರೂರು | |

**ದಿನಾಂಕಃ 26-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ನನಗೆ ಚಾಸಾ-1, 3 ರಿಂದ 12 ಮತ್ತು ಮೃತ ಶಿವಪ್ಪ ಇವರ ಪರಿಚಯ ಇದೆ. ಅದೇ ರೀತಿ ಆರೋಪಿಗಳ ಪರಿಚಯ ಕೂಡಾ ಇದೆ. ಶಿವಪ್ಪ ಇವರು ಗೊಬ್ಬರವನ್ನು ಅನಲೋಡ್ ಮಾಡಬೇಕಾದರೆ ಈಗ ಎರಡು ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆ. ಲಾರಿಯ ಎರಡನೇ ಆರೋಪಿಗೆ ಸೇರಿರುತ್ತದೆ ನಾವು ಅದರಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದೆವು. ಸದರಿ ಗೊಬ್ಬರವನ್ನು ಬಾಣಾವರದಿಂದ ಎಂಸಿ ಹಳ್ಳಿಗೆ ತೆಗೆದುಕೊಂಡು ಹೋಗಿದ್ದೆವು. ಎಂಸಿ ಹಳ್ಳಿಯಲ್ಲಿ ಗೊಬ್ಬರವನ್ನು ಅನಲೋಡ್ ಮಾಡಬೇಕಾದರೆ ಶಿವಪ್ಪ ಇವರು ಇದ್ದಕ್ಕಿದ್ದ ಹಾಗೆ ಲಾರಿಯ ಒಳಗೆ ಬಿದ್ದರು. ಹೋಗಿ ನೋಡಿದಾಗ ಲಾರಿಯಲ್ಲಿಯೇ ಮೃತ ಪಟ್ಟಿದ್ದರು. ಶಿವಪ್ಪನ ಮೃತಪಟ್ಟ ವಿಷಯವನ್ನು ನಾನೇ ನಮ್ಮ ಸ್ನೇಹಿತನ ಮೂಲಕ ಅವರ ಮನೆಗೆ ತಿಳಿಸಿದ್ದೇನೆ. ಅವರು ನೇರವಾಗಿ ಸರ್ಕಾರಿ ಆಸ್ಪತ್ರೆಗೆ ಬಂದಿದ್ದರು. ನಾನು ಪೊಲೀಸರಿಗೆ ಮತ್ತು ನ್ಯಾಯಾಧೀಶರಿಗೆ ಈಗಾಗಲೇ ಹೇಳಿಕೆಗಳನ್ನು ನೀಡಿರುತ್ತೇನೆ. ಮೃತ ಶಿವಪ್ಪನ ಸಾವಿಗೆ ಯಾರು ಕಾರಣ ಎಂದು ಹೇಳಲು ಬರುವುದಿಲ್ಲ. ಈಗ ತೋರಿಸುತ್ತಿರುವ ಸಹಿ ನನ್ನದೇ ಇರುತ್ತದೆ. ಸಾಕ್ಷಿಯ ಸಹಿ ಇರುವ ದಾಖಲೆಗಳು ಪಂಚನಾಮೆಗಳಾಗಿದ್ದು ಅವುಗಳನ್ನು ನಿಪಿ.2 ಮತ್ತು 3, ಸಹಿಗಳನ್ನು ನಿಪಿ.2 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ಹೇಳಿದ ಕಾರಣ ಸಹಿ ಹಾಕಿದ್ದೇನೆ. ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈಗ ತೋರಿಸುತ್ತಿರುವ ಭಾವ ಚಿತ್ರಗಳಲ್ಲಿ ನಾನು ಇದ್ದೇನೆ, ಅವುಗಳನ್ನು ನಿಪಿ.4 ಮತ್ತು 5 ಎಂದು ಗುರುತಿಸಲಾಯಿತು. ಪೊಲೀಸರು ನಮ್ಮ ಸಮಕ್ಷಮ ಯಾವುದೇ ವಾಹನವನ್ನು ಅಮಾನತಪಡಿಸಿಕೊಂಡಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-**

ಒಂದನೇ ಆರೋಪಿ ಎರಡನೇ ಆರೋಪಿಗೆ ಲಾರಿಯ ಡ್ರೈವರ್ ಇರುತ್ತಾರೆ. ನಾವು ಗೊಬ್ಬರವನ್ನು ಅನಲೋಡ್ ಮಾಡುತ್ತಿರಬೇಕಾದರೆ ಒಂದನೇ ಆರೋಪಿ ಯಾವುದೇ ಸೂಕ್ತ ಸೂಚನೆ

ನೀಡದೇ  ಲಾರಿಯನ್ನು ವೇಗವಾಗಿ ಮತ್ತು ನಿರ್ಲಕ್ಷತನದಿಂದ ಹಿಮ್ಮುಖವಾಗಿ ಚಾಲನೆ ಮಾಡಿದ್ದ ಕಾರಣ  ಲಾರಿಯ ಹಿಂಭಾಗ ಶಿವಪ್ಪನಿಗೆ ಬಡಿದು ಆತನು ತೀವ್ರವಾಗಿ ಗಾಯಗೊಂಡನು ಎಂದರೆ ಸರಿಯಲ್ಲ.  ಆ ಸಮಯದಲ್ಲಿ ನಾನು, ಒಂದನೇ ಆರೋಪಿ  ಮತ್ತು ಉಳಿದವರು ಶಿವಪ್ಪನನ್ನು ತರೀಕೆರೆ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದೆವು ಎಂದರೆ ಸರಿಯಲ್ಲ. ವೈದರು ಪರೀಕ್ಷೆ ಮಾಡಿ ಆಗಲೇ ತೀರಿಕೊಂಡಿರುದಾಗಿ ನನಗೆ ತಿಳಿಸಿದರು ಎಂದರೆ ನನಗೆ ಗೊತ್ತಿಲ್ಲ.  ನಾನೇ ಚಾಸಾ-1 ರವರಿಗೆ ಫೋನ್ ಮಾಡಿ ತಿಷಯವನ್ನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ.    ನಾನು ನೀಡಿದ ಮಾಹಿತಿಯ ಮೇರೆಗೆ ಚಾಸಾ-1  ದೂರನ್ನು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.  ಆ ದೂರಿನ ಆಧಾರದೆ ಮೇಲೆ ಪೊಲೀಸ್ ಅಧಿಕಾರಿಗಳು ಗುನ್ನಾ ಸ್ಥಳಕ್ಕೆ ಭೇಟಿ ನಿಪಿ.2 ರಂತೆ ಸ್ಥಳ ಪಂಚನಾಮೆ ಜರುಗಿಸಿ ನಿಪಿ.4 ರಂತೆ ಭಾವಚಿತ್ರವನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ.    ಘಟನಾ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿದ್ದೇನೆ ಎಂದರೆ ಸರಿಯಲ್ಲ.   ನನ್ನ ಜೊತೆ ಚಾಸಾ-11 ಮತ್ತು 12 ಕೂಡಾ ಸಹಿ ಹಾಕಿದ್ದಾರೆ ಎಂದರೆ ಸರಿಯಲ್ಲ. ನಂತರ ಪೊಲೀಸ್ ಠಾಣೆಯಲ್ಲಿ ವಾಹನವನ್ನು ನಿಪಿ.3 ರಂತೆ ಅಮಾನತುಪಡಿಸಿಕೊಂಡು ನಿಪಿ.5 ರಂತೆ   ಫೋಟೊ ತೆಗೆಸಿದ್ದಾರೆ ಎಂದರೆ ಸರಿಯಲ್ಲ.   ಅದಾದ ಸ್ವಲ್ಪ ದಿನಕ್ಕೆ ನಾನು ನ್ಯಾಯಾಲಯಕ್ಕೆ ಬಂದು ಕಲಂ 164 ( 5) ರ ಪ್ರಕಾರ ಹೇಳಿಕೆಯನ್ನು ಕೂಡಾ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.   ಈಗ ತೋರಿಸುತ್ತಿರುವ ದಾಖಲೆಯ ಮೇಲಿರುವ ಸಹಿ ನನ್ನದೇ ಇರುತ್ತದೆ.   ಸಾಕ್ಷಿ ದಾಖಲೆಯನ್ನು ಒಪ್ಪಿಕೊಂಡ ಕಾರಣ ಅದನ್ನು ನಿಪಿ.6 ಎಂದು ಗುರುತಿಸಲಾಯಿತು. ಪೊಲೀಸರಿಗೂ ಕೂಡಾ ಇದೇ ರೀತಿ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ.7 ಎಂದು ಗುರುತಿಸಲಾಯಿತು.    ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಕೂಡಾ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು  ಹೇಳುತ್ತಾರೆ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***